2018 ಕ.ತೀ.ವ 611

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಹೆಚ್.ಜಿ. ರಮೇಶ್

## ಮಾದಿರೆಡ್ಡಿ -ವಿರುದ್ಧ- ಚೌಡರೆಡ್ಡಿ ಮತ್ತು ಇತರರು*

**ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957ರ 34ನೇ ಪ್ರಕರಣ**

**ಕರ್ನಾಟಕ ಸ್ಟ್ಯಾಂಪು ಅಧಿನಿಯಮದ 34ನೇ ಪ್ರಕರಣದಡಿ ಯಾವುದೇ ವ್ಯಕ್ತಿಯು ಪೂರ್ಣ ಸ್ಟ್ಯಾಂಪು ಡ್ಯೂಟಿ ಕೊಡದೇ ಅಂತಹ ದಾಖಲಾತಿಯನ್ನು ವ್ಯಾಜ್ಯದಲ್ಲಿ ಸಾಕ್ಷಿಯೆಂದು ದಾಖಲು ಮಾಡಲು ಇಚ್ಛಿಸುವ ವ್ಯಕ್ತಿಗೆ ನಿರ್ದೇಶನ ನೀಡಲು ಅಧಿಕಾರ ನೀಡುತ್ತದೆ.**

**ಪ್ರಸ್ತುತ ಪ್ರಕರಣದಲ್ಲಿ ಪ್ರತಿವಾದಿ 1 ಮತ್ತು 3 ಮಾರಾಟ ಕರಾರು ಒಪ್ಪಂದವನ್ನು ಸಾಕ್ಷಿಯೆಂದು ಪರಿಗಣಿಸಲು ಹಾಜರುಪಡಿಸದೇ ಇರುವದರಿಂದ, ಕೆಳನ್ಯಾಯಾಲಯವು ಅವರಿಗೆ ಸ್ಟ್ಯಾಂಪು ಡ್ಯೂಟಿ ಕೊಡಲು ನೀಡಿದ ನಿರ್ದೇಶನವು ಕಾನೂನು ಬದ್ಧವಾಗಿಲ್ಲ ಎಂದು ಉಚ್ಚ ನ್ಯಾಯಾಲಯವು ತೀರ್ಮಾನಿಸಿದೆ.**

ಅರ್ಜಿದಾರರ ಪರ: ಮೆ|| ವೈ.ಆರ್. ಸದಾಶಿವ ರೆಡ್ಡಿ ಮತ್ತು ಅಸೋಸಿಯೇಟ್ಸ್, ವಕೀಲರ ಪರವಾಗಿ ಶ್ರೀ ದೀಪಕ್ ಜೆ, ವಕೀಲರು,

1ನೇ ಎದುರುದಾರರ ಪರ: ಶ್ರೀ ಜಿ. ಬಾಲಕೃಷ್ಣ ಶಾಸ್ತ್ರಿ, ವಕೀಲರು,

2ನೇ ಎದುರುದಾರರಿಗೆ ನೋಟೀಸನ್ನು ಜಾರಿಮಾಡಲಾಗಿದೆ,

3ನೇ ಎದುರುದಾರರ ಪರ: ಶ್ರೀ ಸಂತೋಷ್, ವಕೀಲರು.

*ರಿಟ್ ಅರ್ಜಿ ಸಂ: 56179/2013 (ಜಿಎಂ-ಸಿಪಿಸಿ), ದಿನಾಂಕ: 23ನೇ ಮಾರ್ಚ್, 2017.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಹೆಚ್.ಜಿ. ರಮೇಶ್ (ಮೌಖಿಕ):**

ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957ರ 34ನೇ ಪ್ರಕರಣದ ಮೇರೆಗೆ ಸ್ಟಾಂಪು ತೆರಿಗೆ ಮತ್ತು ದಂಡವನ್ನು ಸಂದಾಯ ಮಾಡಲು ಯಾರು ಸೂಚಿಸಬೇಕು? ಇದು ಸಂಕ್ಷಿಪ್ತ ಪ್ರಶ್ನೆಯಾಗಿದ್ದು, ಇದಕ್ಕೆ ಈ ಪ್ರಕರಣದಲ್ಲಿ ಉತ್ತರವನ್ನು ಕೋರಲಾಗಿದೆ.

**2.** ಈ ರಿಟ್ ಅರ್ಜಿಯನ್ನು 3ನೇ ಸಂಖ್ಯೆಯ ಪ್ರತಿವಾದಿಯು ಸಲ್ಲಿಸಿದ್ದು, ಮೂಲ ದಾವೆ ಸಂ.8/2010ರಲ್ಲಿ ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ದಿನಾಂಕ 21.11.2013ರ ವಾದಕಾಲೀನ ಆದೇಶದ ವಿರುದ್ಧ ಸಲ್ಲಿಸಲಾಗಿದೆ. ಪ್ರಶ್ನಿತ ಆದೇಶದ ಮೂಲಕ, ಅಧಿವಿಚಾರಣಾ ನ್ಯಾಯಾಲಯವು, ಕೊರತೆ ಸ್ಟ್ಯಾಂಪು ಶುಲ್ಕವನ್ನು ಮತ್ತು ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ 34ನೇ ಪ್ರಕರಣದ ಪ್ರಕಾರ ದಿನಾಂಕ 10.04.2006ರ ಮಾರಾಟ ಒಪ್ಪಂದದಂತೆ ದಂಡವನ್ನು ಸಂದಾಯ ಮಾಡಲು 1 ಮತ್ತು 3ನೇ ಸಂಖ್ಯೆಯ ಪ್ರತಿವಾದಿಗಳಿಗೆ ಸೂಚಿಸಿದೆ.

**3.** ನಾನು ಪಕ್ಷಕಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರ ವಾದವನ್ನು ಆಲಿಸಿದ್ದು. ದಾಖಲೆಯನ್ನು ಅವಗಾಹನೆ ಮಾಡಿರುತ್ತೇನೆ. ಅರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ದಿನಾಂಕ 10.04.2006ರ ಹಿಂದೆ ಹೇಳಲಾದ ಮಾರಾಟ ಒಪ್ಪಂದವನ್ನು ಸಾಕ್ಷ್ಯದಲ್ಲಿ ಸೇರಿಸಲು 1 ಮತ್ತು 3ನೇ ಸಂಖ್ಯೆಯ ಪ್ರತಿವಾದಿಯು ಒಪ್ಪಿಕೊಂಡಿಲ್ಲವೆಂದು, ಹೀಗಾಗಿ, ಸ್ಟ್ಯಾಂಪು ಶುಲ್ಕ ಮತ್ತು ದಂಡವನ್ನು ಸಂದಾಯ ಮಾಡಲು ಅಧಿವಿಚಾರಣಾ ನ್ಯಾಯಲಯವು ಅವರಿಗೆ ನೀಡಿದ ಸೂಚನೆಯನ್ನು ಕಾನೂನಿನಲ್ಲಿ ಅಧಿಕೃತಗೊಳಿಸಿರಲಿಲ್ಲವೆಂದು ನಿವೇದಿಸಿದ್ದಾರೆ. 1ನೇ ಸಂಖ್ಯೆಯ ಎದುರುದಾರ–ವಾದಿ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ವಾದವನ್ನು ಸರಿಯಾಗಿ ಮಂಡಿಸಿರುವುದಿಲ್ಲ.

**4**. ನನ್ನ ಅಭಿಪ್ರಾಯದಲ್ಲಿ, ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957ರ (ಸಂಕ್ಷಿಪ್ತತೆಗಾಗಿ 'ಅಧಿನಿಯಮ') 34ನೇ ಪ್ರಕರಣದ ಮೇರೆಗೆ ಉದ್ದೇಶಿಸಲಾದಂತೆ ಸ್ಟ್ಯಾಂಪು ಶುಲ್ಕ ಮತ್ತು ದಂಡವನ್ನು ಸಂದಾಯ ಮಾಡಬೇಕೆನ್ನುವ ನಿರ್ದೇಶನವನ್ನು ಸಾಕ್ಷ್ಯದಲ್ಲಿ ಸೇರಿಸಿದ್ದು, ಕೊರತೆ ಸ್ಟ್ಯಾಂಪು ದಸ್ತಾವೇಜನ್ನು ಒಪ್ಪಿಕೊಳ್ಳಲು ಬಯಸಿರುವ ವ್ಯಕ್ತಿಗೆ ಮಾತ್ರ ನೀಡಬಹುದಾಗಿದ್ದು, ಅಧಿನಿಯಮದ 43ನೇ ಪ್ರಕರಣದ ಪ್ರಕಾರ ಯಾರೇ ಇತರ ವ್ಯಕ್ತಿಯಿಂದ ಅವನು ಹಾಗೆ ಸಂದಾಯ ಮಾಡಿದ ಸುಂಕ ಮತ್ತು ದಂಡವನ್ನು ವಸೂಲಿ ಮಾಡಲು ಅವನು ಹಕ್ಕುಳ್ಳವನಾಗಿದ್ದರೆ. ಅವನು, ಸದರಿ ಪ್ರಕರಣದಲ್ಲಿ ಉಪಬಂಧಿಸಲಾದ ಇತರ ವ್ಯಕ್ತಿಗಳಿಂದ ಅದನ್ನು ವಸೂಲಿ ಮಾಡಬಹುದು. ಪ್ರಸ್ತುತ ಪ್ರಕರಣದಲ್ಲಿ, 1 ಮತ್ತು 3ನೇ ಸಂಖ್ಯೆಯ ಪ್ರತಿವಾದಿಗಳು, ಸಾಕ್ಷ್ಯದಲ್ಲಿ ಒಪ್ಪಿಕೊಂಡಿರುವ ದಿನಾಂಕ 10.04.2006ರ ಹಿಂದೆ ಹೇಳಲಾದ ಮಾರಾಟ ಒಪ್ಪಂದವನ್ನು ಒಪ್ಪಿಕೊಳ್ಳದಿರುವುದರಿಂದ, ಸದರಿ ದಸ್ತಾವೇಜುಗಳ ಸಂಬಂಧ ಸುಂಕ ಮತ್ತು ದಂಡವನ್ನು ವಸೂಲಿಮಾಡಲು ಅವರಿಗೆ ನೀಡಿದ ಅಧಿವಿಚಾರಣಾ ನ್ಯಾಯಾಲಯದ ಸೂಚನೆಯು ಕಾನೂನಿನಲ್ಲಿ ಸಮರ್ಥನೀಯವಾಗಿರುವುದಿಲ್ಲ.

**5**. ಅಧಿವಿಚಾರಣಾ ನ್ಯಾಯಾಲಯವು, ಅಧಿನಿಯಮದ ಸಂಬಂಧ ಉಪಬಂಧಗಳ ಹಿನ್ನೆಲೆಯಲ್ಲಿ ವಿಷಯವನ್ನು ಪರಿಶೀಲಿಸಿಲ್ಲದಿರುವುದರಿಂದ ದಿನಾಂಕ 21.11.2013ರ ಪ್ರಶ್ನಿತ ಆದೇಶವನ್ನು ತಳ್ಳಿಹಾಕಲಾಗಿದ್ದು. ಇದನ್ನು ತದನುಸಾರವಾಗಿ ತಳ್ಳಿಹಾಕಲಾಗಿದೆ. ವಿಷಯವನ್ನು ಕಾನೂನಿಗನುಸಾರವಗಿ ಪುನಃ ಪರಿಗಣಿಸಲು ಅಧಿವಿಚಾರಣಾ ನ್ಯಾಯಾಲಯಕ್ಕೆ ಹಿಂದಿರುಗಿಸಲಾಗಿದೆ. ಎರಡೂ ಪಕ್ಷಕಾರರ ಎಲ್ಲಾ ವಾದಗಳನ್ನು ಮುಕ್ತವಾಗಿಡಲಾಗಿದೆ.

ಅರ್ಜಿಯನ್ನು ವಿಲೇ ಮಾಡಲಾಗಿದೆ.